ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **144 /2015**

| | | | |
|---|---|---|---|
| ಸಾಕ್ಷಿಯ ಹೆಸರು | : ಹೆಚ್ ಮಂಜುನಾಥ | ಸಿ.ಡಬ್ಲ್ಯು | - |
| ತಂದೆಯ ಹೆಸರು | : ಹನುಮಂತಪ್ಪ | ಪಿ.ಡಬ್ಲ್ಯು | 5 |
| ವಯಸ್ಸು | : 5 2 ವರ್ಷ | | |
| ಉದ್ಯೋಗ | : ಎ.ಎಸ್.ಐ | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕಃ**19-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2019 ರಿಂದ ಇಲ್ಲಿಯ ವರೆಗೆ ತರೀಕೆರೆಯಲ್ಲಿ ಎ.ಎಸ್.ಐ ಎಂದು ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ದಿಃ13-03-2024 ರಂದು ನ್ಯಾಯಾಲಯದ ಉದ್ಘೋಷಣಾ ವಾರಂಟ್ ನ ಆಧಾರದ ಮೇಲೆ ಅಂತಿಮ ವರದಿಯಲ್ಲಿ ನಮೂದಿಸಿದ ಆರೋಪಿಗಳ ವಿಳಾಸಕ್ಕೆ ತೆರಳಿ ಅಲ್ಲಿ ಆರೋಪಿಗಳ ಬಗ್ಗೆ ವಿಚಾರ ಮಾಡಲಾಗಿ ಅವರ ಇರುವಿಕೆಯ ಬಗ್ಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ. ಅದೇ ದಿನ ಪಂಚರ ಸಮಕ್ಷಮ ಮದ್ಯಾಹ್ನ 12-00 ಗಂಟೆಯಿಂದ 3-00 ರ ಮದ್ಯದಲ್ಲಿ ನಾಲ್ಕು ವಿವಿದ ಸ್ಥಳಗಳಲ್ಲಿ ಪಂಚರ ಸಮಕ್ಷಮ ಪಂಚನಾಮೆಗಳನ್ನು ಜರುಗಿಸಿ ಉದ್ಘೋಷಣಾ ವಾರಂಟ್ ನ ಪ್ರತಿಗಳನ್ನು ಆರೋಪಿಗಳ ಮನೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸಿದ್ದೇನೆ. ಅಲ್ಲದೇ ಆರೋಪಿಗಳು ಯಾವುದೇ ಸ್ಥಿರ ಮತ್ತು ಚರ ಆಸ್ತಿಗಳನ್ನು ಹೊಂದಿಲ್ಲದೇ ಇರುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ವರದಿಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಉದ್ಘೋಷಣಾ ವಾರಂಟ್ ಗಳನ್ನು ನಿ.ಪಿ-21 ರಿಂದ 23, ಪಂಚನಾಮೆಗಳನ್ನು ನಿ.ಪಿ-24 ರಿಂದ 27 ಎಂದು ಗುರುತಿಸಲಾಯಿತು. ಬಿ.ಬಿ.ಎಂ.ಪಿ ರವರು ನೀಡಿದ ವರದಿಗಳನ್ನು ನಿ.ಪಿ-28 ಮತ್ತು 29 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಕಲಂ 299 ರ ಅಡಿಯಲ್ಲಿನ ವಿಚಾರಣೆ ಆಗಿರುವುದರಿಂದ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ **:** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.